9ಸಿಯನ್ನು ಸೇರ್ಪಡೆಗೊಳಿಸಿ ದಿನಾಂಕ 4-7-2001ರಂದು ಹೊರಡಿಸಲಾದ ಎಫ್‌ಡಿ:15:ಪಿಇಎಸ್:2001ನೇ ಸಂಖ್ಯೆಯ ಅಧಿಸೂಚನೆ;

2. 1967ರ ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳು, ನಿಯಮ 7ಕ್ಕೆ ತಿದ್ದುಪಡಿ ಮಾಡಿ ದಿನಾಂಕ 15-6-2001ರಂದು ಹೊರಡಿಸಲಾದ ಎಫ್‌ಡಿ:8:ಪಿಇಎಸ್:2001 (1)ನೇ ಸಂಖ್ಯೆಯ ಅಧಿಸೂಚನೆ;

3. 1967ರ ಕರ್ನಾಟಕ ಅಬಕಾರಿ (ಬಾಟ್ಲಿಂಗ್ ಆಫ್ ಲಿಕ್ಕರ್ಸ್) ನಿಯಮಗಳು, ನಿಯಮ 10ಎ ನಲ್ಲಿ ತಿದ್ದುಪಡಿ ಮಾಡಿ ದಿನಾಂಕ 15-6-2001ರಂದು ಹೊರಡಿಸಲಾದ ಎಫ್‌ಡಿ:8:ಪಿಇಎಸ್:2001 (2)ನೇ ಸಂಖ್ಯೆಯ ಅಧಿಸೂಚನೆ;

4. 1968ರ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳು, ನಿಯಮ 2,2ಸಿ,2ಡಿ, ಅನುಸೂಚಿ ಸಿ ಮತ್ತು ಡಿ ಗಳಿಗೆ ತಿದ್ದುಪಡಿ ಮಾಡಿ ದಿನಾಂಕ 15-6-2001ರಂದು ಹೊರಡಿಸಲಾದ ಎಫ್‌ಡಿ:8:ಪಿಇಎಸ್:2001 (3)ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುವುದು.

ಉಪಾಧ್ಯಕ್ಷರು: ಎಲ್ಲಾ ಕಾಗದ ಪತ್ರಗಳನ್ನೂ ಸದನದ ಮುಂದೆ ಮಂಡಿಸಲಾಯಿತು.

5. ವರದಿಗಳನ್ನೋಪ್ಪಿಸುವುದು

ಉಪಾಧ್ಯಕ್ಷರು: ಶ್ರೀ ಜಿ.ಹೆಚ್.ತಿಪ್ಪಾರೆಡ್ಡಿ (ಅಧ್ಯಕ್ಷರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ) **ಅವರ ಪರವಾಗಿ:-** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 5ನೇ ವರದಿಯ ಶಿಫಾರಸ್ಸುಗಳ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳ ಮೇಲಿನ ಅನುಸರಣಾ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ವರದಿಗಳನ್ನೋಪ್ಪಿಸಲಾಯಿತು

6. ಶಾಸನ ರಚನೆ

(ಅ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಮಂತ್ರಿಗಳು (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ):- ಮಾನ್ಯ ಉಪಾಧ್ಯಕ್ಷರೆ, 2002ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ ವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ;

"2002ನೇ ಸಾಲಿನ ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ವಿಧೇಯಕ ಮಂಡನೆ

ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಮಂತ್ರಿಗಳು (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ):- ಮಾನ್ಯ ಉಪಾಧ್ಯಕ್ಷರೆ, 2002ರ ಕರ್ನಾಟಕ ವಿಧಾನ

ಮಂಡಲಬವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು: ಅನುಬಂಧ 1 ವಿಧೇಯಕವನ್ನು ಮಂಡಿಸಲಾಗಿದೆ.

7. ನಿಯಮ 69ರ ಮೇರೆಗೆ

ವಿಷಯ: ನಾಗಪ್ಪನವರ ಅಪಹರಣ ಮತ್ತು ಅವರ ದುರಂತ ಸಾವಿನ ಬಗ್ಗೆ ಚರ್ಚೆ (ಮುಂದು).

ಉಪಾಧ್ಯಕ್ಷರು: ಈಗ ಮಾನ್ಯ ಸೋಮಶೇಖರ್‌ರವರು ಕಂಟಿನ್ಯೂ ಮಾಡಬೇಕು, ಮ್ಯಾಕ್ಸಿಮಮ್ ಹದಿನೈದು ನಿಮಿಷದಲ್ಲಿ ಮುಗಿಸಬೇಕು ಈಗಾಗಲೇ ಒಂದು ಗಂಟೆ ಐದು ನಿಮಿಷ ಮಾತನಾಡಿದ್ದಿರಿ.

+ಶ್ರೀ ಬಿ.ಸೋಮಶೇಖರ್:- ಮಾನ್ಯ ಉಪಾಧ್ಯಕ್ಷರೆ, ಈಗ ನಾಗಪ್ಪನವರ ಅಪಹರಣಕ್ಕೆ ಪ್ರಮುಖವಾಗಿ ಎರಡು ಕಾರಣಗಳು, ಒಂದು ರಾಜ್‌ಕುಮಾರ್‌ರವರ ಅಪಹರಣವಾದ ಕಾಲದಲ್ಲಿ ಸರ್ಕಾರಕ್ಕೂ ಮತ್ತು ವೀರಪ್ಪನ್‌ರವರು ಇವರಿಬ್ಬರ ಮಧ್ಯೆ ಕೆಲವು ಒಡಂಬಡಿಕೆ ಏನಾಗಿದೆ ಆ ಒಡಂಬಡಿಕೆಯ ಆಧಾರದ ಮೇಲೆ ಷರತ್ತುಗಳನ್ನು ಪೂರೈಸಿಲ್ಲ ಆದ್ದರಿಂದ ವೀರಪ್ಪನ್ ಮಣಿಯವರನ್ನು ಬಿಡುಗಡೆ ಮಾಡಬೇಕು, ಅವರ ಜೊತೆ ಮಾತನಾಡಿದ ನಂತರ ನಾನು ನಾಗಪ್ಪನವರ ಬಿಡುಗಡೆಯ ಬಗ್ಗೆ ಹೇಳುತ್ತೇನೆ ಎಂದು ಹೇಳಿದ್ದಾನೆ. ಮಣಿಯ ಮೇಲೆ ನಮ್ಮ ರಾಜ್ಯದ ಪೊಲೀಸ್‌ನವರು ಏನು ಕೇಸ್‌ಗಳನ್ನು ಹಾಕಿದ್ದಾರೆ? ಯಾವಾಗ ಹಾಕಿದ್ದಾರೆ? ಏತಕ್ಕೆ ಹಾಕಿದ್ದಾರೆ? ಅದರ ಬಗ್ಗೆ ನೋಡುವುದಾದರೆ, ಮಣಿಯ ಮೇಲೆ ಏನು ಶಸ್ತ್ರಾಸ್ತ್ರಗಳ ಸರಬರಾಜು ಮಾಡಿದ್ದಾರೆ ವೀರಪ್ಪನ್‌ಗೆ ಎಂದು ಹೇಳಿ ಏನು ಕೇಸ್ ಹಾಕಿದ್ದಾರೆ ಅದು ಮತ್ತು ಇನ್ನೂ ನಾಲ್ಕು ಕೇಸ್‌ಗಳು, ಈ ನಾಲ್ಕು ಕೇಸ್‌ಗಳಲ್ಲಿ ನ್ಯಾಯಾಲಯ ಬೇಲ್ ಕೊಟ್ಟಿದೆ ಇನ್ನು ಎರಡನೇಯ ಕೇಸ್‌ನಲ್ಲಿ ಮಣಿ ಶಸ್ತ್ರಾಸ್ತ್ರಗಳನ್ನು ಏಕೆ ಸರಬರಾಜು ಮಾಡಿದರು? ಅಂದರೆ ಸೇಲಂ ನಲ್ಲಿದ್ದಂಥ ಮಣಿ ಸುಮಾರು 250, 300 ಕಿಲೋ ಮೀಟರ್ ದೂರ ಮೈಸೂರು - ಮತ್ತು ಚಾಮರಾಜನಗರ ಈ ಕಡೆ ಬಂದು ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡಿದ್ದಾನೆ ಎನ್ನುವುದಾದರೆ, ಈ ರಾಜ್ಯಕ್ಕೆ ಶಸ್ತ್ರಾಸ್ತ್ರಗಳು ಹೇಗೆ ಬಂತು? ಮತ್ತು ಅದಕ್ಕೆ ಯಾರು ಅವಕಾಶ ಕೊಟ್ಟರು? ಪೋಲೀಸ್‌ನವರು ಏನು ಮಾಡುತ್ತಿದ್ದರು?ಮೊದಲು ಪೋಲೀಸ್‌ನವರ ವೈಫಲ್ಯವನ್ನು ಎತ್ತಿ ತೋರಿಸುತ್ತದೆ. ಅವರ ವೈಫಲ್ಯಕ್ಕೆ ಮಣಿಯ ಮೇಲೆ ಕೇಸ್ ಹಾಕಿ, ಅವರು ಹಿಂದೆ ಕೊಟ್ಟಂಥ ಹಣವನ್ನು ವಸೂಲಿ ಮಾಡುವಂಥ ಕೆಲಸ ನಡೆದಿದಯೇ ಹೊರತು ನಿಜವಾಗಿಲೂ ನಾಗಪ್ಪನವರ ಬಿಡುಗಡೆಯ ಕೆಲಸ ನಡೆದಿಲ್ಲವೆಂದು ನಾನು ಒತ್ತಿ ಹೇಳುತ್ತಾ, ಸರ್ಕಾರ 95 ದಿನಗಳ ನಂತರ ಮಣಿ ಕೇಸ್‌ಗಳನ್ನು ಹಿಂತೆಗೆದುಕೊಳ್ಳಬೇಕೆಂದು ಕ್ಯಾಬಿನೆಟ್ ತೀರ್ಮಾನ ತೆಗೆದುಕೊಂಡಿತು. ಆ ಕ್ಯಾಬಿನೆಟ್ ತೀರ್ಮಾನ ತೆಗೆದುಕೊಂಡ ಮೇಲೆಯೂ ಅಂದರೆ ಕಾರ್ಯಾಚರಣೆಯನ್ನು ನಿಲ್ಲಿಸಬೇಕು, ಸಂಧಾನದ ಮುಖಾಂತರ ನಾಗಪ್ಪನವರವನ್ನು ಬಿಡುಗಡೆ ಮಾಡಬೇಕು, ಅದಕೋಸ್ಕರ ಮಣಿಯವರನ್ನು ಬಿಡುಗಡೆ ಮಾಡಬೇಕೆಂದು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿದರು. ಒಂದು ಕಡೆ ಕ್ಯಾಬಿನೆಟ್ ತೀರ್ಮಾನ ಮಾಡಿದ ಮೇಲೆಯೂ ಅಲ್ಲಿ ಕಾಡಿನಲ್ಲಿ ಕಾರ್ಯಚರಣೆ ನಿಲ್ಲಲಿಲ್ಲ.